ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
2ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001
ದೂರವಾಣಿ ಸಂಖ್ಯೆ:080-22372738, E-mail:karnregs@gmail.com

ಸಂ: ಗ್ರಾಅಪ 242 ಉಖಾಯೋ 2011 ದಿನಾಂಕ: 11-03-2015

ಗೆ,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಿಗೆ.

ಮಾನ್ಯರೇ,

ವಿಷಯ: ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ದಿನಾಂಕ: 01-04-2015 ರಿಂದ ಆಧಾರ್ ಆಧಾರಿತ ಹಣ ಸಂದಾಯ ಮಾಡಬೇಕಾಗಿದ್ದು, ಶಾಶ್ವತ ಆಧಾರ ನೋಂದಣಿ ಕೇಂದ್ರಗಳ ಸ್ಥಾಪನೆ ಮತ್ತು ಕಾರ್ಯಾರಂಭ ಕುರಿತು

ಉಲ್ಲೇಖ 1. ಇದೇ ವಿಷಯದ ಕುರಿತು ಆಯುಕ್ತಾಲಯದಿಂದ ಹೊರಡಿಸಿದ ಪತ್ರದ ಸಂಖ್ಯೆ ಗ್ರಾಅಪ 242 ಉಖಾಯೋ 2011 ದಿನಾಂಕ: 28-02-2015
2. ಸರ್ಕಾರದ ಮುಖ್ಯಕಾರ್ಯದರ್ಶಿಗಳ ಪತ್ರದ ಸಂ:ಸಿಇಜಿ/17/ಯುಐಡಿ/2014 ದಿನಾಂಕ: 06.03.2015

*****

ಕೇಂದ್ರ ಸರ್ಕಾರದ ನಿರ್ದೇಶನದಂತೆ, ಉಲ್ಲೇಖ (1) ರಲ್ಲಿ ತಮಗೆ ಈಗಾಗಲೇ ಪತ್ರ ಬರೆಯಲಾಗಿದೆ.

ಸರ್ಕಾರದ ಮುಖ್ಯಕಾರ್ಯದರ್ಶಿಗಳ ಉಲ್ಲೇಖ (2)ರ ಪತ್ರವನ್ನು ಇದರೊಂದಿಗೆ ಲಗತ್ತಿಸಿದ್ದು, ಶಾಶ್ವತ ಆಧಾರ ಕೇಂದ್ರಗಳ ಸದುಪಯೋಗ ಪಡೆಯುವ ನಿಟ್ಟಿನಲ್ಲಿ ಈ ಕೆಳಕಂಡಂತೆ ಕ್ರಮವಹಿಸುವಂತೆ ಕೋರಿದೆ.

ಅ) 778 ಅಟಲ ಜನ ಸ್ನೇಹಿ ಕೇಂದ್ರ (ನಾಡ ಕಛೇರಿಗಳಲ್ಲಿ) 50 ಬೆಂಗಳೂರು ಓನ್ ಮತ್ತು 37 ಕರ್ನಾಟಕ ಓನ್ ಕೇಂದ್ರಗಳಲ್ಲಿ ಶಾಶ್ವತ ಆಧಾರ ನೋಂದಾಣಿ ಕಾರ್ಯಾರಂಭ ಮಾಡಲು ಸಜ್ಜಾಗಿವೆ.

ಆ) ಜಿಲ್ಲಾ ಮಟ್ಟದಲ್ಲಿ ಯೋಜನಾ ನಿರ್ವಹಣಾ ಘಟಕವನ್ನು ಕ್ರಿಯಾಶೀಲಗೊಳಿಸಲು ಜಿಲ್ಲೆಯ ಹೆಚ್ಚುವರಿ ಜಿಲ್ಲಾಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನಿಯೋಜಿಸಿದ್ದಲ್ಲದೇ ಜಿಲ್ಲೆಗೊಬ್ಬ ಸಮಾಲೋಚಕರನ್ನು ಒದಗಿಸಲಾಗಿದೆ. ಇದರ ಜೊತೆಗೆ ಇಬ್ಬರು ಡಾಟಾ ಎಂಟ್ರಿ ಆಪರೇಟರುಗಳನ್ನೂ ಒದಗಿಸಿದ್ದು, ಅವರನ್ನು ವಿವಿಧ ಇಲಾಖೆಗಳ ಫಲಾನುಭವಿ ಡಾಟಾಬೇಸ್‌ನಲ್ಲಿ ಫಲಾನುಭವಿಯ ಆಧಾರ್ ನಂಬರನ್ನು ಸೀಡಿಂಗ್ ಮಾಡಲು ಬಳಸಿಕೊಳ್ಳಬಹುದಾಗಿದೆ, ಈ ಸಂಬಂಧದ ಸಂಪೂರ್ಣ ಖರ್ಚನ್ನು ಇ-ಆಡಳಿತ ಕೇಂದ್ರವೇ ಭರಿಸಲಿದೆ ಎಂಬುದನ್ನು ಗಮನಿಸಬಹುದು.

ಇ) 143 ಮಂದಿ ಪಾಲಿಟೆಕ್ನಿಕ್ ಉಪನ್ಯಾಸಕರನ್ನು ಆಧಾರ್ ಸಂಪನ್ಮೂಲ ವ್ಯಕ್ತಿಗಳನ್ನಾಗಿ ಆರಿಸಿ, ಅವರಿಗೆ ಒಂದು ದಿನದ ತರಬೇತಿಯನ್ನೂ ಇ-ಆಡಳಿತ ಕೇಂದ್ರದಲ್ಲಿ ನೀಡಲಾಗಿದೆ. ಆಧಾರ್ ಕುರಿತು ಜನಜಾಗೃತಿ ಮೂಡಿಸುವುದಕ್ಕಾಗಿ ಇವರ ಸೇವೆಯನ್ನು ಬಳಸಿಕೊಳ್ಳಬಹುದು.

ಮು.ತಿ.ನೋ

JD-1 Kan ltr

ಈ) ಇ-ಆಡಳಿತ ಕೇಂದ್ರವು ಪ್ರತಿಯೊಂದು ಜಿಲ್ಲೆಗೂ ಹೆಚ್ಚುವರಿಯಾಗಿ ಐದು ಆಧಾರ್ ನೋಂದಣಿ ಕಿಟ್‌ಗಳನ್ನು ಒದಗಿಸಲು ನಿರ್ಧರಿಸಿದೆ. ಈ ಐದು ಕಿಟ್‌ಗಳನ್ನು ಜಿಲ್ಲಾಧಿಕಾರಿಗಳು ಶಿಶುಪಾಲನಾ ಕೇಂದ್ರಗಳು, ನಿರ್ವಸತಿಕರ ಪ್ರದೇಶಗಳು, ಕಾರಾಗೃಹಗಳು ಮತ್ತು ವಸತಿ ಶಾಲೆಗಳು ಮುಂತಾದ ಪ್ರದೇಶಗಳಲ್ಲಿ ಶಿಬಿರಗಳನ್ನು ಆಯೋಜಿಸುವ ಪ್ರಕ್ರಿಯೆಗಳಿಗೆ ಬಳಸಿಕೊಳ್ಳುವುದು ಸೂಕ್ತವಾಗುತ್ತದೆ.

ತಮ್ಮ ವಿಶ್ವಾಸಿ

ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.



SD-1 Kan ltr

ಕೌಶಿಕ್ ಮುಖರ್ಜಿ
ಮುಖ್ಯ ಕಾರ್ಯದರ್ಶಿ
ಕರ್ನಾಟಕ ಸರ್ಕಾರ

ದೂರವಾಣಿ : ಕಛೇರಿ : 080 2225 2442
080 2225 3716
ಫ್ಯಾಕ್ಸ್ : 080 2225 8913
ಇ-ಮೇಲ್: cs@karnataka.gov.in

ಕೊಠಡಿ ಸಂಖ್ಯೆ: 320, 3ನೇ ಮಹಡಿ
ವಿಧಾನಸೌಧ, ಬೆಂಗಳೂರು – 560 001

1007/2015

ಸಂಖ್ಯೆ: CEG/17/UID/2014 ದಿನಾಂಕ: 06.03.2015

ಮಾನ್ಯರೇ,

ವಿಷಯ: ಶಾಶ್ವತ ಆಧಾರ್ ನೋಂದಣಿ ಕೇಂದ್ರಗಳ ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕುರಿತು.

ಉಲ್ಲೇಖ: (1) ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯ ಆಧಾರ್ ಸಬಲೀಕರಣ ಸಮಿತಿಯ ದಿನಾಂಕ: 26-10-2013 ರ ನಡವಳಿಗಳು

(2) ದಿನಾಂಕ: 22-01-2015 ರಂದು ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಆಯ್ದ ಯೋಜನೆಗಳ ಫಲಾನುಭವಿಗಳ ಪರಿಶೀಲನಾ ಸಭೆಯ ನಡವಳಿಗಳು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿ ಶಾಶ್ವತ ಆಧಾರ್ ನೋಂದಣಿ ಕೇಂದ್ರಗಳ ಸ್ಥಾಪನೆಯ ಉದ್ದೇಶ ಮತ್ತು ಪ್ರಾಮುಖ್ಯತೆಯ ಹಿನ್ನೆಲೆಯ ಕುರಿತು ತಮ್ಮ ಗಮನವನ್ನು ಸೆಳೆಯಬಯಸುತ್ತೇನೆ. ತಮಗೆ ಈಗಾಗಲೇ ತಿಳಿದಿರುವಂತೆ, ರಾಷ್ಟ್ರದ ಪ್ರತಿಯೊಬ್ಬ ನಿವಾಸಿಗೂ ಒಂದು ವಿಶಿಷ್ಟ ಗುರುತು ಸಂಖ್ಯೆಯನ್ನು ನೀಡಲು ಭಾರತದ ವಿಶಿಷ್ಟ ಗುರುತು ಪ್ರಾಧಿಕಾರವು ಕಾರ್ಯತತ್ಪರವಾಗಿದೆ. ಕರ್ನಾಟಕದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ವ್ಯಾಪ್ತಿಯಲ್ಲಿರುವ ಇ ಆಡಳಿತ ಕೇಂದ್ರವು ಆಧಾರ್ ನೋಂದಣಿಯ ರಿಜಿಸ್ಟ್ರಾರ್ ಎಂದು ಭಾರತದ ವಿಸಿಷ್ಟ ಗುರುತು ಪ್ರಾಧಿಕಾರದ ಜೊತೆಗೆ ಒಡಂಬಡಿಕೆ ಮಾಡಿಕೊಂಡಿರುತ್ತದೆ.

ವಾಸ್ತವಿಕವಾಗಿ ರಾಷ್ಟ್ರದ ಪ್ರತಿಯೊಬ್ಬ ನಿವಾಸಿಗೂ ಒಂದು ಆಧಾರ್ ಸಂಖ್ಯೆಯನ್ನು ನೀಡಿದ ಮಾತ್ರಕ್ಕೇ ಆಧಾರ್ ಯೋಜನೆಯ ಪೂರ್ಣಪ್ರಮಾಣದಲ್ಲಿ ಅನುಷ್ಠಾನವಾಗಿದೆಯೆಂದು ಭಾವಿಸಲಾಗದು. ಪ್ರತಿಯೊಂದು ಶಿಶು ಜನನದಿಂದ ಪ್ರಾರಂಭವಾಗುವ ಆಧಾರ್ ನೋಂದಣಿಯು ನಿವಾಸಿಯ ಮರಣದವರೆಗೆ ಪ್ರತಿಯೊಂದು ಕಾಲಘಟ್ಟದಲ್ಲಿಯೂ ಮಹತ್ವವನ್ನು ಹೊಂದಿರುತ್ತದೆ. ಅದಕ್ಕಾಗಿಯೇ, ಕರ್ನಾಟಕದಲ್ಲಿ ಶಾಶ್ವತ ಆಧಾರ್ ನೋಂದಣಿ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಯೋಜನೆ ರೂಪಿಸಿರುತ್ತದೆ. ಆಧಾರ್ ಯೋಜನೆಯ ಸಬಲೀಕರಣ ಸಮಿತಿಯು ಶಾಶ್ವತ ಆಧಾರ್ ನೋಂದಣಿ ಕೇಂದ್ರಗಳ ಸ್ಥಾಪನೆಗೆ ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ, ರಾಜ್ಯದ 778 ನಾಡಕಛೇರಿಗಳಲ್ಲಿ ( ಅಟಲ್ ಜೀ ಜನಸ್ನೇಹಿ ಕೇಂದ್ರಗಳಲ್ಲಿ) 50 ಬೆಂಗಳೂರು ಒನ್ ಮತ್ತು 37 ಕರ್ನಾಟಕ ಒನ್ ಕೇಂದ್ರಗಳಲ್ಲಿ ಶಾಶ್ವತ ಆಧಾರ್ ನೋಂದಣಿ ಕೇಂದ್ರಗಳು ಕಾರ್ಯಾರಂಭ ಮಾಡಲು ಸಜ್ಜಾಗಿವೆ.

ಈ ನಿಟ್ಟಿನಲ್ಲಿ ಇ ಆಡಳಿತ ಕೇಂದ್ರವು ಈ ಕೆಳಕಂಡ ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿರುತ್ತದೆ.

put up letter

1. ಜಿಲ್ಲಾ ಮಟ್ಟದಲ್ಲಿ ಯೋಜನಾ ನಿರ್ವಹಣಾ ಘಟಕವನ್ನು ಕ್ರಿಯಾಶೀಲಗೊಳಿಸಲು ಜಿಲ್ಲೆಯ ಹೆಚ್ಚುವರಿ ಜಿಲ್ಲಾಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನಿಯೋಜಿಸಿದ್ದಲ್ಲದೇ ಜಿಲ್ಲೆಗೊಬ್ಬ ಸಮಾಲೋಚಕರನ್ನು ಒದಗಿಸಲಾಗಿದೆ. ಇದರ ಜೊತೆಗೆ, ಇಬ್ಬರು ಡ್ಯಾಟಾ ಎಂಟ್ರಿ ಆಪರೇಟರುಗಳನ್ನೂ ಒದಗಿಸಿದ್ದು, ಅವರನ್ನು ವಿವಿಧ ಇಲಾಖೆಗಳ ಫಲಾನುಭವಿ ಡಾಟಾಬೇಸ್ ನಲ್ಲಿ ಫಲಾನುಭವಿಯ ಆಧಾರ್ ನಂಬರನ್ನು ಸೀಡಿಂಗ್ ಮಾಡಲು ಬಳಸಿಕೊಳ್ಳಬಹುದಾಗಿದೆ. ಈ ಸಂಬಂಧದ ಸಂಪೂರ್ಣ ಖರ್ಚನ್ನು ಇ ಆಡಳಿತ ಕೇಂದ್ರವೇ ಭರಿಸಲಿದೆ.
2. ಅಟಲ್ ಜೀ ಜನಸ್ನೇಹಿ ಕೇಂದ್ರಗಳು, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಕೇಂದ್ರಗಳಲ್ಲಿ ಶಾಶ್ವತ ಆಧಾರ್ ನೋಂದಣಿ ಕೇಂದ್ರಗಳ ಸ್ಥಾಪನೆಗಾಗಿ ಅಗತ್ಯವಿರುವ ಎನ್ರೋಲ್ಮೆಂಟ್ ಕಿಟ್ ಮತ್ತು ಇತರ ಉಪಕರಣಗಳನ್ನು ಇ ಆಡಳಿತ ಕೇಂದ್ರವು ಒದಗಿಸಿರುತ್ತದೆ. ಈ ಬಗ್ಗೆ ಸಂಪೂರ್ಣ ಖರ್ಚುವೆಚ್ಚಗಳನ್ನೂ ಇ ಆಡಳಿತ ಕೇಂದ್ರವು ಭರಿಸಿರುತ್ತದೆ.
3. ಅಟಲ್ ಜೀ ಜನಸ್ನೇಹಿ ಕೇಂದ್ರಗಳು, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಕೇಂದ್ರಗಳಲ್ಲಿ ಆಧಾರ್ ನೋಂದಣಿ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕಾದರೆ, ಭಾರತದ ವಿಶಿಷ್ಟ ಗುರುತು ಪ್ರಾಧಿಕಾರದ ಕಟ್ಟಳೆಯ ಪ್ರಕಾರ ಪ್ರಮಾಣೀಕೃತ ಆಪರೇಟರು/ಸೂಪರ್ವೈಸರು ಅತ್ಯಗತ್ಯವಾಗಿರುತ್ತದೆ. ಅದಕ್ಕಾಗಿಯೇ, ಇ ಆಡಳಿತ ಕೇಂದ್ರವು ನಾಡಕಛೇರಿಗಳು, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಕೇಂದ್ರಗಳಲ್ಲಿರುವ 1316 ಆಪರೇಟರುಗಳಿಗೆ ತರಬೇತಿ ನೀಡಿ,1214 ಮಂದಿಗೆ ಆಪರೇಟರು/ಸೂಪರ್ವೈಸರು ಪ್ರಮಾಣೀಕರಣ ಒದಗಿಸಿಕೊಟ್ಟಿದೆ.
4. ಅಟಲ್ ಜೀ ಜನಸ್ನೇಹಿ ಕೇಂದ್ರಗಳ ನಿರ್ದೇಶಕರು ನಾಡಕಛೇರಿಗಳ ವ್ಯಾಪ್ತಿಯಲ್ಲಿ ಆಧಾರ್ ನೋಂದಣಿ ರಿಜಿಸ್ಟ್ರಾರ್ ಆಗಿ ಭಾರತದ ವಿಶಿಷ್ಟ ಗುರುತು ಪ್ರಾಧಿಕಾರದ ಜೊತೆಗೆ ಒಡಂಬಡಿಕೆ ಮಾಡಿಕೊಂಡಿರುತ್ತಾರೆ. ಹಾಗೆಯೇ, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಕೇಂದ್ರಗಳು ಕರ್ನಾಟಕ ರಾಜ್ಯದ ಆಧಾರ್ ನೋಂದಣಿ ರಿಜಿಸ್ಟ್ರಾರ್ ಅಧಿಕಾರ ಹೊಂದಿರುವ ಇ ಆಡಳಿತ ಕೇಂದ್ರದ ವ್ಯಾಪ್ತಿಯಲ್ಲಿರುವ ನಿರ್ದೇಶಕರು ಇಡಿಸಿಎಸ್ ಇವರ ಕಕ್ಷೆಗೆ ಒಳಪಟ್ಟಿರುತ್ತದೆ.
5. 143 ಮಂದಿ ಪಾಲಿಟೆಕ್ನಿಕ್ ಉಪನ್ಯಾಸಕರನ್ನು ಆಧಾರ್ ಸಂಪನ್ಮೂಲ ವ್ಯಕ್ತಿಗಳನ್ನಾಗಿ ಆರಿಸಿ, ಅವರಿಗೆ ಒಂದು ದಿನದ ತರಬೇತಿಯನ್ನೂ ಇ ಆಡಳಿತ ಕೇಂದ್ರದಲ್ಲಿ ನೀಡಲಾಗಿದೆ. ಆಧಾರ್ ಕುರಿತು ಜನಜಾಗೃತಿ ಮೂಡಿಸುವುದಕ್ಕಾಗಿ ಇವರ ಸೇವೆಯನ್ನು ಬಳಸಿಕೊಳ್ಳಬಹುದು.

ಇತ್ತೀಚೆಗೆ ಆಧಾರ್ ಯೋಜನೆಯ ಪರಾಮರ್ಶೆ ಮಾಡುವ ಸಂದರ್ಭದಲ್ಲಿ ರಾಜ್ಯದಲ್ಲಿ 4.3 ಕೋಟಿ ನಿವಾಸಿಗಳನ್ನು ಆಧಾರ್ ನೋಂದಣಿಗೆ ಒಳಪಡಿಸಲಾಗಿರುತ್ತದೆ ಎಂಬ ಮಾಹಿತಿ ತಿಳಿದುಬಂದಿರುತ್ತದೆ. ಅಂದರೆ, ರಾಜ್ಯದ ಜನಸಂಖ್ಯೆಯಲ್ಲಿ ಶೇಕಡಾ 77.41 ರಷ್ಟನ್ನು ಆಧಾರ್ ನೋಂದಣಿಯಲ್ಲಿ ಸಾಧಿಸಲಾಗಿದೆ. ಇನ್ನೂ ಗಣನೀಯ ಪ್ರಮಾಣದ ನೋಂದಣಿ ಬಾಕಿ ಇರುತ್ತದೆ.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡೂ ಸಹ ತಮ್ಮ ವಿವಿಧ ಇಲಾಖೆಗಳ ಜನಪರ ಯೋಜನೆಗಳ ಅನುಷ್ಠಾನದಲ್ಲಿ ಆಧಾರ್ ಸಂಖ್ಯೆಯನ್ನು ಅಳವಡಿಸಬೇಕೆಂದು ಚಿಂತನೆ ನಡೆಸಿರುವುದರ ಹಿನ್ನೆಲೆಯಲ್ಲಿ ಆಧಾರ್ ನೋಂದಣಿ ಕೇಂದ್ರಗಳ ಮೇಲೆ ಒತ್ತಡ ಹೆಚ್ಚುವ ನಿರೀಕ್ಷೆ ಇದ್ದೇ ಇದೆ. ಈ ಹೊಣೆಗಾರಿಕೆಯನ್ನು ನಿಭಾಯಿಸುವ ಸವಾಲನ್ನು ನಾವು ಜಯಿಸಬೇಕಾಗಿರುತ್ತದೆ.

ಈ ಎಲ್ಲಾ ಪ್ರಮುಖ ಅಂಶಗಳ ಅವಲೋಕನೆಯಿಂದ ನಮ್ಮ ಮುಂದೆ ತುಂಬಾ ಹೆಚ್ಚಿನ ಜವಾಬ್ದಾರಿ ಇರುವುದು ವ್ಯಕ್ತಪಡುತ್ತದೆ. ಆದುದರಿಂದ ಈಕೆಳಕಂಡಂತೆ ನಾವು ಕಾರ್ಯ ಪ್ರವೃತ್ತರಾಗಬೇಕಾಗಿರುತ್ತದೆ.

(ಅ) ಶಾಶ್ವತ ಆಧಾರ್ ನೋಂದಣಿ ಕೇಂದ್ರಗಳಿಗೆ ಒದಗಿಸಲಾಗಿರುವ ಎನ್ರೋಲ್ಮೆಂಟ್-ಕಿಟ್ ಮತ್ತು ಇನ್ನಿತರ ಪರಿಕರಗಳು ಸಂಬಂಧಪಟ್ಟ ಕೇಂದ್ರಗಳಿಗೆ ತಲುಪಿ ಬಹಳ ದಿನಗಳೇ ಕಳೆದಿದ್ದರೂ ಸಹ, ಅವುಗಳ ಇನ್ಸ್ಟಾಲೇಷನ್ ಇನ್ನೂ ಆಗಿರುವುದಿಲ್ಲ ಎಂಬ ಅಂಶವು ತುಂಬಾ ಆತಂಕಕಾರಿಯಾಗಿದೆ. ಜಿಲ್ಲಾಧಿಕಾರಿಗಳು ಈ ಪ್ರಕ್ರಿಯೆಯನ್ನು 15-03-2015ರೊಳಗೆ ಪೂರ್ಣಗೊಳಿಸಬೇಕೆಂದು ಸರ್ಕಾರ ಬಯಸುತ್ತದೆ.

(ಆ) ಶಾಶ್ವತ ಆಧಾರ್ ನೋಂದಣಿ ಕೇಂದ್ರಗಳು ಕಾರ್ಯಾರಂಭ ಮಾಡಿದರೂ ಸಹ, ಆಧಾರ್ ನೋಂದಣಿ ಗುರಿಸಾಧನೆಗೆ ಸಹಕಾರಿಯಾಗಲಾರದು. ಅದಕ್ಕಾಗಿ ಜಿಲ್ಲಾಧಿಕಾರಿಗಳ ವ್ಯಾಪ್ತಿಗೆ ಒಳಪಡಿಸಿರುವ ನಾನ್ ಸ್ಟೇಟ್ ರಿಜಿಸ್ಟ್ರಾರ್ ಏಜನ್ಸಿಗಳ ಸೇವೆಯನ್ನು ಜಿಲ್ಲಾಧಿಕಾರಿಗಳು ಸಮರ್ಪಕವಾಗಿ ಬಳಸಿಕೊಳ್ಳಬೇಕೆಂದು ಸರ್ಕಾರ ಬಯಸುತ್ತದೆ. ವಿಶೇಷ ಶಿಬಿರಗಳ ಆಯೋಜನೆ ಮತ್ತು ರಸ್ತೆ ಸಂಪರ್ಕಗಳಿಲ್ಲದ ಕುಗ್ರಾಮಗಳಿಗೆ ಯೋಜನೆಯನ್ನು ವಿಸ್ತರಿಸಿ, ನೋಂದಣಿ ಪ್ರಕ್ರಿಯೆಯನ್ನು ಹೆಚ್ಚು ಪರಿಣಾಮಕಾರಿಗೊಳಿಸುವ ಹೊಣೆ ಜಿಲ್ಲಾಧಿಕಾರಿಗಳ ಮೇಲೆ ಇದೆ ಎಂಬ ಅಂಶವನ್ನು ಪುನರುಚ್ಚರಿಸಿದೆ.

(ಈ) ಇ ಆಡಳಿತ ಕೇಂದ್ರವು ಪ್ರತಿಯೊಂದು ಜಿಲ್ಲೆಗೂ ಹೆಚ್ಚುವರಿಯಾಗಿ ಐದು ಆಧಾರ್ ನೋಂದಣಿ ಕಿಟ್ ಗಳನ್ನು ಒದಗಿಸಲು ನಿರ್ಧರಿಸಿದೆ. ಈ ಐದು ಕಿಟ್ ಗಳನ್ನು ಜಿಲ್ಲಾಧಿಕಾರಿಗಳು ಶಿಶುಪಾಲನಾ ಕೇಂದ್ರಗಳು, ನಿರ್ವಸತಿಕರ ಪ್ರದೇಶಗಳು, ಕಾರಾಗೃಹಗಳು ಮತ್ತು ವಸತಿ ಶಾಲೆಗಳು ಮುಂತಾದ ಪ್ರದೇಶಗಳಲ್ಲಿ ಶಿಬಿರಗಳನ್ನು ಆಯೋಜಿಸುವ ಪ್ರಕ್ರಿಯೆಗಳಿಗೆ ಬಳಸಿಕೊಳ್ಳುವುದು ಸೂಕ್ತವಾಗುತ್ತದೆಂದು ಸರ್ಕಾರ ಅಭಿಪ್ರಾಯಪಡುತ್ತದೆ.

(ಉ) ಇದುವರೆಗೆ 21 ಜಿಲ್ಲೆಗಳಲ್ಲಿ ಆಧಾರ್ ಕುರಿತು ಜಾಗೃತಿ ಮೂಡಿಸುವ ಕಾರ್ಯಾಗಾರಗಳು ಪೂರ್ಣಗೊಂಡಿರುತ್ತವೆ. ಒಂದೆರಡು ಜಿಲ್ಲೆಗಳಲ್ಲಿ ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಯು ಕಾರ್ಯಾಗಾರದಲ್ಲಿ ಭಾಗವಹಿಸುವ ಉತ್ಸುಕತೆಯನ್ನು ತೋರದಿರುವುದನ್ನು ಗಮನಿಸಲಾಗಿದೆ. ಜಿಲ್ಲಾಧಿಕಾರಿಗಳು ಈ ಕಾರ್ಯಾಗಾರದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸದಿರುವುದೂ ಸಹ ಉಳಿದ ಅಧಿಕಾರಿಗಳ ನಿರುತ್ಸಾಹಕ್ಕೆ ಕಾರಣವಿರಬಹುದು. ಇನ್ನೂ ಕಾರ್ಯಾಗಾರಗಳು ನಡೆಯದಿರುವ ಜಿಲ್ಲೆಗಳಲ್ಲಿ ಕಾರ್ಯಾಗಾರದ ಪ್ರಾಮುಖ್ಯತೆಯನ್ನು ಗಂಭಿರವಾಗಿ ಪರಿಗಣಿಸಲು ಕೋರಿದೆ.

(ಎ) ಆಧಾರ್ ಯೋಜನೆಗೆ ಸಂಬಂಧಿಸಿದ ಇನ್ಫರ್ಮೇಷನ್, ಎಜುಕೇಷನ್ ಮತ್ತು ಕಮ್ಯುನಿಕೇಷನ್ ಚಟುವಟಿಕೆಗಳ ಹಾದಿಯಲ್ಲಿ ಇ ಆಡಳಿತ ಕೇಂದ್ರವು ರಾಜ್ಯದ ಪತಿಯಿಂದ ಆಧಾರ್ ರಾಯಭಾರಿಯ ನಿಯೋಜನ, ವೃತ್ತಪತ್ರಿಕೆಗಳಲ್ಲಿ ವ್ಯಾಪಕ ಪ್ರಚಾರ, ಬಾನುಲಿ ಮೂಲಕ ಆಧಾರ್ ಕುರಿತು ಜಾಗೃತಿ ಮೂಡಿಸುವ ಸಂದೇಶಗಳ ಬಿತ್ತರ ಮುಂತಾದ ಕ್ರಮಗಳನ್ನು ಕೈಗೊಂಡಿರುತ್ತದೆ. ಈ ಜನಜಾಗೃತಿ ವಿಚಾರಗಳು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪುವಂತೆ ಕ್ರಮ ಕೈಗೊಳ್ಳಲು ಈಗಾಗಲೇ ಇ ಆಡಳಿತ ಕೇಂದ್ರವು ಒದಗಿಸಿರುವ ಅನುದಾನದಲ್ಲಿ ಉಳಿದಿರುವ ಹಣವನ್ನು ಬಳಸಿಕೊಳ್ಳಬಹುದಾಗಿರುತ್ತದೆ. ಅಗತ್ಯವಿದ್ದಲ್ಲಿ, ಹೆಚ್ಚಿನ ಅನುದಾನಕ್ಕೆ ಸಕಾರಣದ ಪ್ರಸ್ತಾವನೆಯನ್ನೂ ಸಲ್ಲಿಸಬಹುದಾಗಿದೆ.

(ಐ) ಆಧಾರ್ ಸಂಖ್ಯೆಯನ್ನು ಸೀಡಿಂಗ್ ಮಾಡಲು ಈಗಾಗಲೇ ಒದಗಿಸಿರುವ ಬ್ಬರು ಆಪರೇಟರುಗಳ ಜೊತೆಗೆ ಅವಶ್ಯಕವೆಂದು ಜಿಲ್ಲಾ ಆಡಳಿತ ನಿರ್ಧರಿಸಿದರೆ, ಇನ್ನೂ ಮೂರುಮಂದಿ ಹೆಚ್ಚುವರಿ ಆಪರೇಟರುಗಳನ್ನು ಹೊರಗುತ್ತಿಗೆ ಆಧಾರದ ಮೇರೆಗೆ ನಿಯೋಜಿಸಿಕೊಳ್ಳಲು ಅವಕಾಶವಿದೆ. ಸಂಬಂಧಿಸಿದ ಇನ್ಫಾರ್ಮೇಷನ್, ಎಜುಕೇಷನ್ ಮತ್ತು

ಕಮ್ಯುನಿಕೇಷನ್ ಚಟುವಟಿಕೆಗಳಿಗಾಗಿ ನೀಡಿರುವ ಅನುದಾನ ಉಳಿಕೆ ಹಣದಲ್ಲಿ ಇವರ ಸಂಭಾವನೆಯನ್ನು ಭರಿಸಬಹುದು. ಅಗತ್ಯವಿದ್ದರೆ, ಹೆಚ್ಚಿನ ಅನುದಾನಕ್ಕಾಗಿ ಇ ಆಡಳಿತ ಕೇಂದ್ರವನ್ನು ಸಂಪರ್ಕಿಸಬಹುದಾಗಿದೆ.

ಈ ಮೇಲೆ ವಿವರಿಸಿದ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರವು ತನ್ನೆಲ್ಲಾ ಜನಪರ ಯೋಜನೆಗಳನ್ನೂ ಆಧಾರ್ ಸಂಖ್ಯೆಯನ್ನಾಧರಿಸಿ ಜಾರಿಗೊಳಸಿಲು ಚಿಂತನೆ ನಡೆಸುತ್ತಿರುವುದರಿಂದ ಆಧಾರ್ ಯೋಜನೆಯ ಅನುಷ್ಠಾನವನ್ನು ವಿಶೇಷ ಆದ್ಯತೆಯ ಮೇರೆಗೆ ಮುನ್ನಡೆಸಬೇಕೆಂದು ವಿನಂತಿಸುತ್ತೇನೆ

ಶುಭಾಶಯಗಳೊಂದಿಗೆ ,

ತಮ್ಮ ವಿಶ್ವಾಸಿ.

ಕೌಶಿ ಮು

( ಕೌಶಿಕ್ ಮುಖರ್ಜಿ)